ದಿನಾಂಕಃ 06-02-2019 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಜಿ ಆರ್ ಎ ವಕೀಲರಿಂದಃ**

ನಾನು ಪ್ರತಿವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಮ್ಮ ವಕೀಲರು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.

ಉಪ ವಿಭಾಗಾಧಿಕಾರಿಗಳು, ಪಾಂಡವಪುರ ಇವರ ಆದೇಶದ ದೃಢೀಕೃತ ನಕಲನ್ನು ನಿಡಿ 2 ಎಂದು , ವಾದಿಯು ಪ್ರತಿವಾದಿಯರಿಗೆ ತಮ್ಮ ವಕೀಲರ ಮೂಲಕ ಕೊಟ್ಟ ನೋಟೀಸನ್ನು ನಿಡಿ 3 ಎಂದು, ಅಂಚೆ ಲಕೋಟೆಯನ್ನು ನಿಡಿ 4 ಎಂದು , ಪಹಣಿಯನ್ನು ನಿಡಿ 5 ಎಂದು , ಓ.ಎಸ್ 34ಃ1986 ಇದರ ರೋಜನಾಮೆ ಹಾಗೂ ಮಧ್ಯಂತರ ಅರ್ಜಿಯ ದೃಢೀಕೃತ ನಕಲುಗಳನ್ನು ನಿಡಿ 6 ಮತ್ತು ನಿಡಿ 7 ಎಂದು , ಓ ಎಸ್ 119ಃ2018 ರ ವಾದ ಪತ್ರ ಹಾಗೂ ಮಧ್ಯಂತರ ಅರ್ಜಿ ನಂ 1 ರ ದೃಢೀಕೃತ ನಕಲುಗಳನ್ನು ನಿಡಿ 8 ಮತ್ತು 9 ಎಂದು , ಓ ಎಸ್ 1202018 ರ ವಾದ ಪತ್ರ ಹಾಗೂ ಮದ್ಯಂತರ ಅರ್ಜಿ ನಂ1 ರ ದೃಢೀಕೃತ ನಕಲುಗಳನ್ನು ನಿಡಿ 10 ಮತ್ತು 11 ಎಂದು , ಓ ಎಸ್ 121ಃ2018 ರ ವಾದ ಪತ್ರ ಹಾಗೂ ಮಧ್ಯಂತರ ಅರ್ಜಿ ನಂ 1 ರ ದೃಢೀಕೃತ ನಕಲುಗಳನ್ನು ನಿಡಿ 12 ಮತ್ತು 13 ಎಂದು , ಓ ಎಸ್ 362ಃ2010 ರ ಎಮರ್ಜೆಂಟ್ ಕಾಪಿ ಅಪ್ಲಿಕೇಶನ್ ದೃಢೀಕೃತ ನಕಲುಗಳನ್ನು ನಿಡಿ 14 ಎಂದು , ಓ.ಎಸ್ 262ಃ2010 ರ ವಕಲಾತ್ ನ ದೃಢೀಕೃತ ನಕಲನ್ನು ನಿಡಿ 15 ಎಂದು, ಸಾಮಾನ್ಯ ಅಧಿಕಾರ ಪತ್ರದ ದೃಢೀಕೃತ ನಕಲನ್ನು ನಿಡಿ 16 ಎಂದು , ಆರ್ ಮಿಸ್ 84ಃ2015-16 ರಲ್ಲಿ ಸಲ್ಲಿಸಿದ ವಕಾಲತ್ ನ ದೃಢೀಕೃತ ನಕಲನ್ನು ನಿಡಿ 17 ಎಂದು , ಓ ಎಸ್ 362ಃ2010 ರ ಪಿಡಬ್ಲ್ಯೂ 1 ಇವರ ಡಿಪೋಸಿಷನ್ ನ್ನು ನಿಡಿ 18 ಎಂದು , ಎಂ ಎ 3ಃ11 ರಲ್ಲಿ ಸಲ್ಲಿಸಿದ ಎಮೆರ್ಜೆಂಟ್ ಕಾಪಿ ಅಪ್ಲಿಕೇಶನ್ ದೃಢೀಕೃತ ನಕಲನ್ನು ನಿಡಿ 19 ಎಂದು , ಎಂ ಎ 3ಃ2011 ರಲ್ಲಿ ಸಲ್ಲಿಸಿದ ವಕಾಲತ್ ನ ದೃಢೀಕೃತ ನಕಲನ್ನು ನಿಡಿ 20 ಎಂದು , ಓ ಎಸ್ 362ಃ2010 ರಲ್ಲಿ ಮದ್ಯಂತರ ಅರ್ಜಿ ನಂಬರ್ 1 ಮತ್ತು 2 ರ ಮೇಲಿನ ಆದೇಶದ ದೃಢೀಕೃತ ನಕಲನ್ನು ನಿಡಿ 21 ಎಂದು ಗುರುತಿಸಲಾಯಿತು. ಆದ್ದರಿಂದ ವಾದಿಯ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದ ಂಡಾಧಿಕಾರಿಗಳು, ಕೃಷ್ಣರಾಜಪೇಟೆ.

ದಿನಾಂಕಃ 13-02-2019 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀಮತಿ ವಿ ಕೆ ಎಸ್ ವಕೀಲರಿಂದಃ**

11 ಪಹಣಿಗಳನ್ನು ನಿಡಿ 22 ರಿಂದ ನಿಡಿ 32 ಎಂದು , ಇ ಸಿ ಯನ್ನು ನಿಡಿ 33 ಎಂದು , 5 ದೃಢೀಕೃತ ಕ್ರಯಪತ್ರಗಳನ್ನು ನಿಡಿ 34 ರಿಂದ ನಿಡಿ 38 ಎಂದು ಗುರುತಿಸಲಾಯಿತು. ಆದ್ದರಿಂದ ವಾದಿಯ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ** ವಾದಿ ಪರ ಶ್ರೀ ಎನ್.ಎಂ ವಕೀಲರು ಕಾಲಾವಕಾಶ ಕೋರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದ ಂಡಾಧಿಕಾರಿಗಳು, ಕೃಷ್ಣರಾಜಪೇಟೆ.

ದಿನಾಂಕಃ 18-03-2019 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಎನ್ ಎಂ ವಕೀಲರಿಂದಃ**

ಕನ್ನಡ ಓದಲು ಬರುವುದಿಲ್ಲ ಹಾಗೂ ಕನ್ನಡದಲ್ಲಿ ಸಹಿ ಮಾಡಲು ಬರುತ್ತದೆ. ನಾನು 6 ನೇ ತರಗತಿಯವರೆಗೆ ಓದಿದ್ದೇನೆ. ನಾನು 1 ನೇ ತರಗತಿ ಪಾಸು ಮಾಡಿ ನಂತರ ಮುಂದಿನ ತರಗತಿಗಳನ್ನು ಪಾಸ್ ಮಾಡಿ 6 ನೇ ತರಗತಿ ಓದಿದ್ದೇನೆ. ನಾನು ಕೆ ಆರ್ ಪೇಟೆ ಟೌನಿನ ಸರ್ಕಾರಿ ಶಾಲೆಯಲ್ಲಿ ಓದಿದ್ದೇನೆ.ಸದರಿ ಶಾಲೆ ಕನ್ನಡ ಮಾದ್ಯಮದ ಶಾಲೆ. ನನ್ನ ತಂದೆತಾಯಿಗೆ ನಾವು ಒಟ್ಟು 7 ಜನ ಮಕ್ಕಳು. ಮೊದಲನೆಯವರು ಭಾಗ್ಯಮ್ಮ, 2 ನೇಯವರು ಕೆ.ಎನ್.ನಾಗರಾಜು, 3 ನೇಯವರು ಜಯಮ್ಮ, 4 ನೇಯವರು ಸರೋಜಮ್ಮ , 5 ನೇಯವರು ಕಾಳೇಗೌಡ , 6 ನೇಯವರು ನಾಗರತ್ನ , 7 ನೇಯವರು ಯಶೋಧ. ನಮ್ಮ ಅಣ್ಣ ಕೆ ಎನ್ ನಾಗರಾಜು ವಕೀಲರಾಗಿದ್ದು , ನಾನು ಸಂತೆ ವ್ಯಾಪಾರ ಮಾಡುತ್ತೇನೆ. ನಮ್ಮ ಎಲ್ಲಾ ಆಸ್ತಿಗಳು ಇನ್ನೂ ಒಟ್ಟು ಕುಟುಂಬದಲ್ಲಿದ್ದು ಭಾಗ ಆಗಿಲ್ಲ. ನಮ್ಮ ಅಣ್ಣ ಕೆ ಎನ್ ನಾಗರಾಜು ರವರ ಆಪೀಸಿನಲ್ಲಿ ಈಗ ವಿ.ಕೆ. ಸ್ವರೂಪ ವಕೀಲರು ಹಾಗೂ ಎಸ್.ಪಿ. ಗಿರೀಶ್ ವಕೀಲರು ಜ್ಯೂನಿಯರ್ ಆಗಿ ಕೆಲಸ ಮಾಡುತ್ತಿದ್ದು ಅವರಿಗಿಂತ ಮುಂಚೆ ಕೆ.ಮಂಜುಳ ವಕೀಲರು ಜ್ಯೂನಿಯರ್ ಆಗಿದ್ದರು.

ವ್ಯವಸ್ಥಾ ಪತ್ರದ ಮೂಲಕ ವಾದಿಯರಿಗೆ ಹೋಗಿರುವ ಸ್ವತ್ತಿನಲ್ಲಿ ನಾವು ಮನೆ ಕಟ್ಟುತ್ತಿದ್ದೇವೆ ಎಂದು ವಾದಿಯರು ಈ ಕೇಸು ಹಾಕಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ 8 ರಿಂದ 15 ರವರೆಗೆ ಪೋಟೋಗಳನ್ನು ತೋರಿಸುತ್ತಿದ್ದು ಸದರಿ ಪೋಟೋಗಳಲ್ಲಿ ಕಾಣುವ ಕಟ್ಟಡದ ಬಗ್ಗೆ ತಕರಾರು ಮಾಡಿ ವಾದಿಯರು ಕೇಸು ಹಾಕಿದರು ಎಂದರೆ ಸರಿ. ವಾದಿಯರು ಈ ಕೇಸು ಹಾಕುವ ಸಮಯದಲ್ಲಿ ನಿಪಿ 8 ರಲ್ಲಿ ಕಾಣುವ ಪೋಟೋದಲ್ಲಿ ಕಟ್ಟಡ ಸದರಿ ಲೆವೆಲ್ ಗೆ ಇತ್ತು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ ಹಾಗೂ ಸದರಿ ಕಟ್ಟಡ ಕೇಸು ಹಾಕುವ ಪೂರ್ವದಲ್ಲಿ ಮಾಡಲಾಗಿದೆ ಎನ್ನುತ್ತಾರೆ. ಸಾಕ್ಷಿಗೆ ಈಗ 3 ಪೋಟೋಗಳನ್ನು ತೋರಿಸುತ್ತಿದ್ದು ಈಗ ಸದರಿ ಕಟ್ಟಡ ಸದರಿ ಪೋಟೋದಲ್ಲಿ ಕಾಣುವ ಲೆವೆಲ್ ಗೆ ಇದೆ ಎಂದರೆ ಸಾಕ್ಷಿ

ಹೌದು ಎಂದು ಒಪ್ಪಿದ್ದು ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ 20 ರಿಂದ 22 ಎಂದು ಗುರುತಿಸಲಾಯಿತು. ದಾವಾ ಸ್ವತ್ತು ವಾದಿಯರಿಗೆ ನಿಪಿ1 ರಂತೆ ವ್ಯವಸ್ಥಾಪತ್ರದ ಮೂಲಕ ಬಂದಿದೆ ಎಂದು ಸಾಕ್ಷಿಗೆ ಸದರಿ ವ್ಯವಸ್ಥಾ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಸದರಿ ಆಸ್ತಿ ಅವರಿಗೆ ಬಂದಿಲ್ಲ ಹಾಗೂ ಸದರಿ ವ್ಯವಸ್ಥಾ ಪತ್ರ ಸುಳ್ಳು ಎನ್ನುತ್ತಾರೆ. ಸದರಿ ವ್ಯವಸ್ಥಾ ಪತ್ರದ ಆದಾರದ ಮೇಲೆ 1ನೇ ವಾದಿಯ ಗಂಡ ಸಿದ್ದಲಿಂಗೇಗೌಡರಿಗೆ ನಿಪಿ 3 ರಂತೆ ಪಹಣಿ ಆಗಿದೆ ಎಂದರೆ ಗೊತ್ತಿಲ್ಲ.

ನಾನು ಸ್ವಂತಕ್ಕೆ ಜಮೀನು ಕ್ರಯಕ್ಕೆ ಪಡೆದಿದ್ದೇನೆ. ನನ್ನ ಹೆಸರಿಗೆ ಪಹಣಿ ಇಂಡೀಕರಣ ಆಗಿದೆ. ಆರ್.ಟಿ.ಸಿ ನನ್ನ ಹೆಸರಿಗೆ ಆದಾಗ ಯಾವ ಮೂಲಕ ಬಂದಿದ್ದು ಎಂದು ಷರಾ ಬರೆದಿರುತ್ತಾರೆ ಎಂದರೆ ಸರಿ. ನಿಪಿ 3 ರಲ್ಲಿ ಕಲಂ ನಂ 10 ರಲ್ಲಿ ವ್ಯವಸ್ಥಾ ಪತ್ರದ ಮೂಲಕ ಬಂದಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವ ವಿಚಾರ ಗೊತ್ತು. ಸದರಿ ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ.

ಸಿದ್ದಲಿಂಗೇಗೌಡ ತಮ್ಮ ಜೀವಿತಾವಧಿಯಲ್ಲಿ ತಮ್ಮ ಕುಟುಂಬದ ಸ್ವತ್ತುಗಳನ್ನು ಯಾರು ಯಾರಿಗೆ ಹೋಗಬೇಕು ಎಂದು ದಿನಾಂಕ 06.02.1958 ರಂದು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ವ್ಯವಸ್ಥಾ ಪತ್ರ ಮಾಡಿದ್ದಾರೆ ಎಂದರೆ ಸುಳ್ಳು. ದಾವಾ ಸ್ವತ್ತಿನಲ್ಲಿ ಸಿದ್ದಲಿಂಗೇಗೌಡ ಸಾಯುವವರೆಗೂ ಸ್ವಾದೀನಲ್ಲಿದ್ದು ಅವರು ತೀರಿಕೊಂಡ ನಂತರ ವಾದಿಯರು ಸ್ವಾದೀನದಲ್ಲಿದ್ದಾರೆ ಎಂದರೆ ಸುಳ್ಳು. ವಾದಿಯರ ದಾವಾ ಸ್ವತ್ತನ್ನು ಲಪಟಾಯಿಸಲು ನಾವು ಬಲವಂತವಾಗಿ ಹಾಗೂ ಅಕ್ರಮವಾಗಿ ಅವರ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಹೋಗಿದ್ದಕ್ಕೆ ಅವರು ನಮ್ಮ ಮೇಲೆ ಕೇಸು ಹಾಕಿದ್ದಾರೆ ಎಂದರೆ ಸುಳ್ಳು. ನಾವು ಕಟ್ಟಡ ಕಟ್ಟಲು ಅನ್ಯಕ್ರಾಂತ ಮಾಡಿಸಿದ್ದೇವಾ ಹಾಗೂ ಕಟ್ಟಡ ಪರವಾನಿಗೆ ಪಡೆದಿದ್ದೇವಾ ಎಂದರೆ ಸಾಕ್ಷಿಯು ನಮಗೆ ಸುಮಾರು ಕಡೆ ಜಮೀನು ಇದ್ದು ನಾವು ಜಮೀನಿನಲ್ಲಿ ಫಾರಂ ಹೌಸ್ ಮಾಡುತ್ತಿರುವಾಗ ವಾದಿಯರು ಬಂದು ನಮ್ಮ ಕಟ್ಟಡಕ್ಕೆ ತಕರಾರು ಮಾಡಿದ್ದಾರೆ ಎನ್ನುತ್ತಾರೆ. ವಿವಾದಿತ ಸ್ವತಿನಲ್ಲಿ ಕಟ್ಟಡ ಕಟ್ಟಲು ಲೈಸೆನ್ಸ್ ಪಡೆದಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತು ವಾದಿಯರಿಗೆ ಬಂದಿರುವ ಬಗ್ಗೆ ವ್ಯವಸ್ಥಾಪತ್ರ ಹಾಜರುಪಡಿಸಿದ್ದು ಸದರಿ ಸ್ವತ್ತು ನಮಗೆ ಹೇಗೆ ಬಂತು ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆಯನ್ನು ಹಾಜರುಪಡಿಸಿದ್ದೇವೆ. ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ತೋರಿಸಲು ನ್ಯಾಯಾಲಯಕ್ಕೆ ದುರಸ್ತು ಕಾಪಿ , ಪಹಣಿ , ಮತ್ತು ಖಾತಾ ನಕಲನ್ನು ಕೊಟ್ಟಿದ್ದೇವೆ. ಸದರಿ ಸ್ವತ್ತು ನಮ್ಮ ತಾತನಿಂದ ನಮ್ಮ ತಂದೆಗೆ ಬಂದಿದ್ದು ನಂತರ ನಮ್ಮ ತಂದೆಯಿಂದ ನನ್ನ ಹೆಸರಿಗೆ ಎಂಟುವರೆ ಗುಂಟೆ ಹಾಗೂ ನಮ್ಮ ತಂದೆ ಹೆಸರಿಗೆ 27 ಗುಂಟೆ ಇರುವ ಬಗ್ಗೆ ಸದರಿ ಮೇಲೆ ಹೇಳಿದ 3 ದಾಖಲೆಗಳಲ್ಲಿ ನಮೂದು ಇದೆ ಎನ್ನುತ್ತಾರೆ. ದಾವಾ ಸ್ವತ್ತಿನ ಮೇಲೆ ನಮಗೆ ಮಾಲೀಕತ್ವ ಇರುವ ಬಗ್ಗೆ ಸಂಬಂದಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ನಮ್ಮ ಪರವಾಗಿ ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ನನ್ನ ಕೈಯಲ್ಲಿ ಕೊಟ್ಟರೆ ದಾವಾ ಸ್ವತ್ತಿನ ಮೇಲೆ ನಮಗೆ ಮಾಲೀಕತ್ವ ಇರುವ ಬಗ್ಗೆ ಟೈಟಲ್ ಡೀಡನ್ನು ತೋರಿಸಲು ಆಗುವುದಿಲ್ಲ. ವಾದಿಯರು ವಕೀಲರ ಮೂಲಕ ದಾವಾ ಆಸ್ತಿಗೆ ಸಂಬಂದಪಟ್ಟಂತೆ ನಮಗೆ ಯಾವುದೇ ನೋಟೀಸ್ ಕಳುಹಿಸಿಲ್ಲ. ಸಾಕ್ಷಿಗೆ ಈಗ ನಿಡಿ 3 ನ್ನು ತೋರಿಸುತ್ತಿದ್ದು ಅದು ಯಾವ ದಾಖಲಾತಿ ಎಂದರೆ ಸಾಕ್ಷಿ ಸುಮ್ಮನಾಗುತ್ತಾರೆ. ನಿಡಿ 3 ಸೃಷ್ಟಿ ದಾಖಲೆಯಾ ಎಂದರೆ ಸಾಕ್ಷಿಯು ನನಗೆ ಅರ್ಥ ಆಗುತ್ತಿಲ್ಲ ಎನ್ನುತ್ತಾರೆ. ನಿಡಿ 3 ರಂತಹ ದಾಖಲೆ ಈ ಮೊದಲು ನಮಗೆ ಬಂದಿತ್ತ ಎಂದರೆ ಸಾಕ್ಷಿಯು ಬಂದಿರಬಹುದು ಆದರೆ ಯಾವುದು ಎಂದು ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ನನ್ನ ಹೆಸರಿಗೆ ಯಾವುದಾದರೂ ಒಂದು ದಾಖಲೆ ಅಂಚೆ ಮೂಲಕ ಬಂದರೆ ಅದನ್ನು ಓದಿ ತಿಳಿದುಕೊಳ್ಳುವ ಆಸಕ್ತಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ನಮ್ಮ ಅಣ್ಣ ಓದುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಮ್ಮ ಅಣ್ಣ ನನ್ನ ಕಡೆಯಿಂದ ಓದಿಸಿ ಅದನ್ನು ಕೇಳಿ ತಿಳಿದುಕೊಳ್ಳುವ ಅಸಕ್ತಿ ನನಗೆ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನಿಡಿ 3 ಕ್ಕೆ ನಾವು ಪ್ರತ್ಯುತ್ತರ ನೋಟೀಸ್ ಕೊಟ್ಟಿಲ್ಲ.

ನಾವು ಕಟ್ಟಡ ಮಾಡುತ್ತಿರುವ ಜಾಗದ ಮಾರುಕಟ್ಟೆ ಬೆಲೆ ಜಾಸ್ತಿ ಇದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಅಲ್ಲಿ 1 ಗುಂಟೆಗೆ ಮಾರುಕಟ್ಟೆ ಬೆಲೆ ಈಗ ಎಷ್ಟು ನಡೆಯುತ್ತಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತೇ ಇಲ್ಲ ಎನ್ನುತ್ತಾರೆ. ಹಾಗಾಗಿ ನಾನು ಅಲ್ಲಿಗೆ ಯಾವತ್ತು ಹೋಗೇ ಇಲ್ಲ ಹಾಗಾಗಿ ನನಗೆ ಮಾರುಕಟ್ಟೆ ಬೆಲೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅಲ್ಲಿ ನಾನು ಹೋಗುತ್ತೇನೆ ಮಾರುಕಟ್ಟೆ ಬೆಲೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ 3 ನ್ನು ನಾವೇ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತೇ ಇಲ್ಲ ಎನ್ನುತ್ತಾರೆ.

ಶ್ರೀಮತಿ ಕೆ. ಮಂಜುಳ ವಕೀಲರು ನಮ್ಮ ಅಣ್ಣನ ಅಪೀಸಿನಲ್ಲಿ ಜ್ಯೂನಿಯರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ವ್ಯವಸ್ಥಾಪತ್ರದ ಮೂಲಕ ದಾವಾ ಜಮೀನು 1 ನೇ ವಾದಿಯ ಗಂಡನಿಗೆ ಹೋಗಿದ್ದು ಸದರಿ ಜಮೀನನ್ನು ನಮ್ಮ ತಂದೆ , ಶ್ರೀಮತಿ ಮಂಜುಳ ವಕೀಲರ ತಾತ ಕೆ ಕೆ ಮಾದೇಗೌಡ , ಜೋಗಿನಿಂಗೇಗೌಡ ಅವನ ಹೆಂಡತಿ ಜವರಮ್ಮ ಸೇರಿಕೊಂಡು ಕಂದಾಯಾಧಿಕಾರಿಗಳೊಂದಿಗೆ ಶಾಮೀಲಾಗಿ ಕಾನೂನುಬಾಹಿರವಾಗಿ ನಿಪಿ 5 ರಂತೆ ದಾಖಲೆ ಸೃಷ್ಟಿ ಮಾಡಿದ್ದಾರೆ ಎಂದರೆ ಸುಳ್ಳು. ನಿಪಿ 5 ರ ಬಗ್ಗೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಕಾಲಾವಕಾಶ ಕೋರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದ ಂಡಾಧಿಕಾರಿಗಳು, ಕೃಷ್ಣರಾಜಪೇಟೆ.

ದಿನಾಂಕಃ 08-04-2019 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎನ್.ಎಂ ವಕೀಲರಿಂದಃ**

ನಿಡಿ 6 ನ್ನು ಯಾವ ಉದ್ದೇಶಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಿಡಿ 6 ರಲ್ಲಿ ಇಂಗ್ಲೀಷ್ ಬರವಣಿಗೆಯಾಗಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ 6 ರಲ್ಲಿ 2 ಮತ್ತು 3 ನೇ ಪುಟದಲ್ಲಿ ಕನ್ನಡದಲ್ಲಿ ಬರವಣಿಗೆಯಾಗಿದೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ನಿಡಿ 6 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಡಿ 7 ನ್ನು ಯಾವ ವಿಚಾರಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ ಎಂದರೆ ಗೊತ್ತಿಲ್ಲ. ನಿಡಿ 7 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಡಿ 2 ನ್ನು ಯಾವ ವಿಚಾರಕ್ಕೆ ಹಾಜರುಪಡಿಸಿದ್ದೇವೆ ಎಂದರೆ ಗೊತ್ತಿಲ್ಲ. ನಿಡಿ 2 ರಲ್ಲಿ ಬರೆದ ವಿಚಾರ ಗೊತ್ತಿಲ್ಲ. ಸಾಕ್ಷಿ ಯು ಈಗ ನಿಡಿ 2 ರ ಕಾಸ್ ಟೈಟಲ್ ನ್ನು ಓದಿಹೇಳಿದರೂ ಸಹ ಗೊತ್ತಿಲ್ಲ ಎನ್ನುತ್ತಾರೆ. ನಿಡಿ 4 ನ್ನು ಯಾವ ವಿಚಾರಕ್ಕೆ ನ್ಯಾಯಾಲಯದ ಮುಂದೆ

ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹೇಳಿ ಪುನಃ ನೆನಪಿಲ್ಲ ಎನ್ನುತ್ತಾರೆ. ನಿಡಿ 8 ನ್ನು ಯಾವ ವಿಚಾರಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದರೆ ಸಾಕ್ಷಿಯು ನಮ್ಮ ಜಮೀನಿಗೆ ಸಂಬಂದಪಟ್ಟಂತೆ ಕೇಸು ಹಾಕಿದ್ದು ಅದರಲ್ಲಿರುವ ವಿಚಾರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ ಎನ್ನುತ್ತಾರೆ. ನಿಡಿ 8 ರಂತೆ ಕೇಸನ್ನು ನಾನೇ ಹೇಳಿ ಹಾಕಿಸಿದ್ದೇನೆ. ನಿಡಿ 9 ನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿಯು ಅದರ ಬಗ್ಗೆ ನೆನಪಿಲ್ಲ ಎನ್ನುತ್ತಾರೆ. ನಿಡಿ 10 ನ್ನು ಯಾವ ವಿಚಾರಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 11 ನ್ನು ಯಾವ ವಿಚಾರಕ್ಕೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 12 ನ್ನು ಯಾವ ವಿಚಾರಕ್ಕೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 13 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 14 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 15 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 16 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಿಡಿ 16 ರಲ್ಲಿ ಫೋಟೋದಲ್ಲಿ ಕಾಣುವ ವ್ಯಕ್ತಿಗಳು ನಮ್ಮ ಮೇಲೆ ಕೇಸು ಹಾಕಿದ್ದು ನಮ್ಮ ಆಸ್ತಿಗೆ ಸಂಬಂದಪಟ್ಟಂತೆ ರೆಕಾರ್ಡನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ ಎನ್ನುತ್ತಾರೆ. ನಿಡಿ 17 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಎ.ಸಿ ನ್ಯಾಯಾಲಯದಲ್ಲಿ ದುರಸ್ತಿಯನ್ನು ರದ್ದುಪಡಿಸಿದ್ದು ನಿಡಿ 17 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ನಿಡಿ 18 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಚಕ್ಕುಬಂದಿ ಮತ್ತು ಸರ್ವೆ ನಂಬರ್ ಬಗ್ಗೆ ಹೇಳಿದರೆ ಗೊತ್ತಾಗುತ್ತದೆ ಎನ್ನುತ್ತಾರೆ. ನಿಡಿ 18 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿ. ನಿಡಿ 19 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 20 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 21 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ 22 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ನಿಡಿ 22 ರಲ್ಲಿ ಬರೆದಿರುವ ಸರ್ವೆ ನಂಬರ್ ನಮಗೆ ಸೇರಿದ್ದು ಎನ್ನುತ್ತಾರೆ. ಸದರಿ ಸರ್ವೆ ನಂಬರ್ ಜಮೀನು ನಮಗೆ ಹೇಗೆ ಬಂತು ಎಂದರೆ ಸಾಕ್ಷಿಯು ನಿಡಿ 22 ರಲ್ಲಿ ಬರೆದಿರುವ ಸರ್ವೆ ನಂಬರ್ ಜಮೀನು ಮೂಲತಃ ನಮ್ಮ ತಾತನಿಗೆ ಸೇರಿದ್ದು ನಮ್ಮ ತಾತನಿಂದ ನಮ್ಮ ತಂದೆಗೆ ಬಂದಿದ್ದು ನಂತರ ಸದರಿ ಸರ್ವೆ ನಂಬರ್ ಜಮೀನಿನಲ್ಲಿ ಎಂಟುವರೆ ಗುಂಟೆ ಜಮೀನು ನನಗೆ ಬಂದಿದ್ದು ಉಳಿದ ಜಮೀನು ನಮ್ಮ ತಂದೆ ಹೆಸರಿನಲ್ಲಿದೆ ಎನ್ನುತ್ತಾರೆ. ಈ ವಿಚಾರಕ್ಕೆ ಸಂಬಂದಪಟ್ಟ ಎಲ್ಲಾ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ಸಾಕ್ಷಿಗೆ ಈಗ ನಿಡಿ 23 ನ್ನು ತೋರಿಸುತ್ತಿದ್ದು ಸದರಿ ದಾಖಲೆಯನ್ನು ಯಾವ ವಿಚಾರಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಸರ್ವೆ ನಂ 10ಃ2 ಪಿ1 ಪಿ2 ನಮ್ಮ ಜಮೀನು ಎನ್ನುತ್ತಾರೆ. ಸದರಿ ಸರ್ವೆ ನಂಬರ್ ಜಮೀನು ನಮ್ಮ ತಾತನಿಂದ ನಮ್ಮ ತಂದೆಗೆ ಬಂದಿದ್ದು ನಮ್ಮ ತಂದೆಯಿಂದ ನಮಗೆ ಬಂದಿದೆ ಎನ್ನುತ್ತಾರೆ. ನಿಡಿ 23 ಕ್ಕೆ ಸಂಬಂದಪಟ್ಟ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ನಿಡಿ 24 ನ್ನು ಯಾವ ವಿಚಾರಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಒಟ್ಟು 27 ಗುಂಟೆ ಜಮೀನು ಇದ್ದು ಜೋಗಿನಿಂಗೇಗೌಡನಿಗೆ 8

ಗುಂಟೆ ಹೋಗಿದ್ದು, ಚಂದ್ರೇಗೌಡನಿಗೆ ಅಂದರೆ ಶ್ರೀಮತಿ ಮಂಜುಳ ವಕೀಲರ ತಂದೆಗೆ 10 ಗುಂಟೆ ಹೋಗಿದ್ದು, ಹಾಗೂ 9 ಗುಂಟೆ ನಮ್ಮ ಭಾಗಕ್ಕೆ ಬಂದಿದೆ ಎನ್ನುತ್ತಾರೆ. ನಿಡಿ 24 ಕ್ಕೆ ಸಂಬಂದಪಟ್ಟಂತೆ ಎಲ್ಲಾ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ನಿಡಿ 25 ಮತ್ತು 26 ನ್ನು ಯಾವ ವಿಚಾರಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಚಕ್ಕುಬಂದಿಯನ್ನು ಸಾಬೀತುಪಡಿಸಲು ಹಾಜರುಪಡಿಸಿದ್ದೇವೆ ಎನ್ನುತ್ತಾರೆ. ನಿಡಿ 27 ರಿಂದ 32 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಚಕ್ಕುಬಂದಿ ಸಾಬೀತುಪಡಿಸಲು ಹಾಜರುಪಡಿಸಿದ್ದೇವೆ ಎನ್ನುತ್ತಾರೆ.

ನಿಡಿ 23 ರಿಂದ 32 ರ ಕ್ರಮಬದ್ಧತೆಯನ್ನು ಪ್ರಶ್ನಿಸಿ ವಾದಿಯರು ಎ.ಸಿ. ನ್ಯಾಯಾಲಯದಲ್ಲಿ ಆರ್. ಮಿಸ್ 84ಃ2015-16 ರಂತೆ ನಿಪಿ 17 ರಂತೆ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಕೇಸಿನಲ್ಲಿ ನಾವು ವಕೀಲರನ್ನು ಕೊಟ್ಟಿದ್ದೇವೆ ಎಂದರೆ ಸಾಕ್ಷಿಯು ಸದರಿ ಕೇಸಿನಲ್ಲಿ ಪಕ್ಷಗಾರರು ಅವರವರ ಪರವಾಗಿ ವಕೀಲರನ್ನು ನೇಮಿಸಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ ಮೇಲ್ಮನವಿಯಲ್ಲಿ ನಾನೂ ಕೂಡ ಪಾರ್ಟಿಯಾಗಿದ್ದೇನೆ ಎಂದರೆ ಸರಿ. ಕೆ.ಕೆ. ಮಾದೇಗೌಡ ಇವರು ಮಂಜುಳ ವಕೀಲರ ಚಿಕ್ಕಪ್ಪ ಎಂದರೆ ಸರಿ. ಓ.ಎಸ್ 119ಃ2018 ನಾಗರತ್ನಮ್ಮ ಯಾರ ಕಡೆಯಿಂದ ಕೇಸು ಹಾಕಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಓ.ಎಸ್ 119ಃ2018 ನ್ನು ಶ್ರೀಮತಿ ವಿ.ಕೆ.ಎಸ್ ವಕೀಲರು ಹಾಗೂ ಶ್ರೀ ಎಸ್.ಗಿರೀಶ್ ವಕೀಲರು ಹಾಕಿದ್ದಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ ಓ.ಎಸ್ 120ಃ 2018 ಹಾಗೂ 121ಃ2018 ದಾವೆಗಳನ್ನು ಸದರಿ ಇಬ್ಬರು ವಕೀಲರು ನಮ್ಮ ಅಣ್ಣನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದು ಸದರಿ ಇಬ್ಬರು ವಕೀಲರು ಹಾಕಿದ್ದಾರೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ 34 ನ್ನು ಯಾವ ವಿಚಾರಕ್ಕೆ ನ್ಯಾಯಾಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಿಡಿ 34 ನ್ನು ಸ್ವಲ್ಪ ಹೊತ್ತು ಓದಿದ್ದು ಅದರಲ್ಲಿ ಬರೆದಿರುವ ಅಕ್ಷರ ಅರ್ಥ ಆಗುತ್ತಿಲ್ಲ ಹಾಗೂ ಅದನ್ನು ಓದಿ ಹೇಳಿದರೆ ಗೊತ್ತಾಗುತ್ತದೆ ಎನ್ನುತ್ತಾರೆ. ನಿಡಿ 35 ರಿಂದ 38 ನ್ನು ಯಾವ ವಿಚಾರಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಸದರಿ ದಾಖಲೆಗಳಲ್ಲಿ ಬರೆದ ವಿಚಾರ ಓದಿಹೇಳಿದರೆ ಅರ್ಥ ಆಗುತ್ತದೆ ಎನ್ನುತ್ತಾರೆ. ನಿಡಿ 1 ರಿಂದ 38 ದಾಖಲೆಗಳನ್ನು ಯಾವ ರೀತಿ ಪಡೆದುಕೊಂಡಿದ್ದೇವೆ ಎಂದರೆ ಸಾಕ್ಷಿಯು ಅರ್ಜಿ ಕೊಟ್ಟು ಪಡೆದುಕೊಂಡಿದ್ದೇವೆ ಎನ್ನುತ್ತಾರೆ. ಸದರಿ ಅರ್ಜಿಯನ್ನು ಹರೀಶ್ ಎನ್ನುವವರು ಕೊಟ್ಟಿದ್ದಾರೆ. ಸದರಿ ದಾಖಲೆಗಳನ್ನು ನನ್ನ ಹೆಸರಿನಲ್ಲಿಯೇ ಅರ್ಜಿ ಕೊಟ್ಟು ಪಡೆದುಕೊಳ್ಳಲು ಯಾವುದಾದರೂ ತೊಂದರೆ ಇತ್ತ ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇರಲಿಲ್ಲ ಹಾಗೂ ನನಗೆ ಓದಲು ಬರುವುದಿಲ್ಲ ಹಾಗಾಗಿ ನಾನು ಸದರಿ ಅರ್ಜಿಯನ್ನು ಹರೀಶನಿಂದ ಕೊಡಿಸಿ ಸದರಿ ದಾಖಲೆಗಳನ್ನು ಪಡೆದುಕೊಂಡಿದ್ದೇನೆ ಎನ್ನುತ್ತಾರೆ. ಸದರಿ 38 ದಾಖಲೆಗಳನ್ನು ಪಡೆಯಲು ತಾಲ್ಲೂಕು ಆಪೀಸಿಗೆ ಅರ್ಜಿ ಕೊಡಿಸಿದ್ದೇನೆ.

ದಿನಾಂಕ 06.02.1958 ರ ವ್ಯವಸ್ಥಾಪತ್ರದ ಪ್ರಕಾರ 1 ನೇ ವಾದಿಯ ಗಂಡ ಸಿದ್ದಲಿಂಗೇಗೌಡನಿಗೆ ಸರ್ವೆ 10ಃ2 ಬಿ ರಲ್ಲಿ ಒಟ್ಟು 27 ಗುಂಟೆ ವಿಸ್ತೀರ್ಣದಲ್ಲಿ 10 ಗುಂಟೆ ಜಮೀನು ಬಂದಿದ್ದು ಮಂಜುಳ ಲಾಯರ್ ಇವರ ಚಿಕ್ಕಪ್ಪ ಕೆ.ಕೆ. ಮಾದೇಗೌಡ ಇವರು ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಶರೀಖ್ ಆಗಿ ಕಾನೂನುಬಾಹಿರವಾಗಿ ಸದರಿ 10 ಗುಂಟೆ ಜಮೀನನ್ನು ತಮ್ಮ ಹೆಸರಿಗೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮಂಜುಳ ಲಾಯರ್ ಇವರ ತಾತ ಕಾಳೇಗೌಡರಿಗೆ ನೋಂದಣಿ ವ್ಯವಸ್ಥಾ ಪತ್ರದ ಮೂಲಕ ಹೋಗಿದ್ದ 27 ಗುಂಟೆ ಜಮೀನನ್ನು ನಮ್ಮ ತಂದೆ ಹಾಗೂ ಮಂಜುಳ ವಕೀಲರ ತಂದೆ ಶರೀಖ್ ಆಗಿ ನಮ್ಮ ತಂದೆ ಹೆಸರಿಗೆ ಅಕ್ರಮವಾಗಿ ಖಾತೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಗಂಡ ಸಿದ್ದಲಿಂಗೇಗೌಡನಿಗೆ ವ್ಯವಸ್ಥಾಪತ್ರದ ಮೂಲಕ ಹೋಗಿದ್ದ ಒಟ್ಟು 27 ಗುಂಟೆ ಜಮೀನನ್ನು ನಾನು ಹಾಗೂ ನಮ್ಮ ಕುಟುಂಬದವರು ಮತ್ತು ಮಂಜುಳ ವಕೀಲರ ತಂದೆ ಮತ್ತು ಅವರ ಚಿಕ್ಕಪ್ಪ ಸೇರಿ ವಾದಿಯರಿಗೆ ಮೋಸ ಮಾಡಲು ಕೆಲವೊಂದು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯರಿಗೆ ಸೇರಿದ ಜಮೀನನ್ನು ಅಕ್ರಮವಾಗಿ ಲಾಭ ಹೊಂದಲು ನಾವು ಮತ್ತು ಮಂಜುಳ ವಕೀಲರ ತಂದೆ ಮತ್ತು ಚಿಕ್ಕಪ್ಪ ಸೇರಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಸದರಿ 25 ಗುಂಟೆ ಜಮೀನು ತುಂಬಾ ಬೆಲೆ ಬಾಳುವ ಜಮೀನು ಆಗಿದ್ದು ಅದನ್ನು ಹೇಗಾದರೂ ಮಾಡಿ ಪಡೆದುಕೊಳ್ಳಲು ನಾವು ಮತ್ತು ಮಂಜುಳ ವಕೀಲರು ಸೇರಿ ಶರೀಖ್ ಆಗಿ ಓ.ಎಸ್ 362ಃ2010 ರಂತೆ ದಾವೆಯನ್ನು ಇದೇ ನ್ಯಾಯಾಲಯದ ಮುಂದೆ ಹಾಕಿದ್ದೇವೆ ಎಂದರೆ ಸುಳ್ಳು. ಓ.ಎಸ್ 362ಃ2010 ರಂತೆ ದಾವೆಯನ್ನು ಮಂಜುಳ ವಕೀಲರು ಜಮೀನು ತಮಗೆ ಬರಬೇಕೆಂದು ನಮ್ಮ ಮೇಲೆ ಹಾಕಿದ್ದಾರೆ. ಸಾಕ್ಷಿಯು ಮುಂದುವರೆದು ಈ ಕೇಸಿನ ವಾದಿ ಪುಟ್ಟಮಾಯಮ್ಮ ಇವರು ಸರ್ವೆ ನಂ 10ಃ2 ಪಿ1 ಪಿ2 ಮೇಲೆ ಸಂಬಂದಪಟ್ಟಂತೆ ಹಾಕಿದ್ದಾರೆ ಎನ್ನುತ್ತಾರೆ. ಈ ಕೇಸಿನ 27 ಗುಂಟೆ ಜಮೀನು ಹಾಗೂ ಓ ಎಸ್ 362ಃ2010 ರ 27 ಗುಂಟೆ ಜಮೀನನ್ನು ಸಿದ್ದಲಿಂಗೇಗೌಡರ ತಂದೆ ಮೊಗಣ್ಣಗೌಡರು ಸದರಿ ಜಮೀನನ್ನು ವ್ಯವಸ್ಥಾಪತ್ರದ ಮೂಲಕ ಸಿದ್ದಲಿಂಗೇಗೌಡನಿಗೆ ಭಾಗಾಂಶಕ್ಕೆ ಕೊಟ್ಟಿದ್ದರು ಎಂದರೆ ಸರಿಯಲ್ಲ. 1 ನೇ ವಾದಿಯ ಗಂಡನನ್ನು ನಾನು ನೋಡಿದ್ದೇನೆ. ಸದರಿ ವ್ಯವಸ್ಥಾಪತ್ರದಲ್ಲಿ ಬರೆದಿರುವ 27 ಗುಂಟೆ ಜಮೀನು ಬಿಟ್ಟು ಸಿದ್ದಲಿಂಗೇಗೌಡ ಬೇರೆ ಜಮೀನಿನಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಸಿದ್ದಲಿಂಗೇಗೌಡನ ಒಂದು ಜಮೀನು ಸರ್ಕಾರಕ್ಕೆ ಅಕ್ವೇರ್ ಆಗಿದ್ದು ಇನ್ನುಳಿದ 2 ಜಮೀನುಗಳಲ್ಲಿ ಅವರು ಇದ್ದಾರೆ ಎನ್ನುತ್ತಾರೆ. ಸರ್ವೆ ನಂ.189 ರಲ್ಲಿ ಸಿದ್ದಲಿಂಗೇಗೌಡನ 27 ಗುಂಟೆ ಜಮೀನು ಸರ್ಕಾರಕ್ಕೆ ಅಕ್ವೇರ್ ಆಗಿದೆ. ಸದರಿ ಸರ್ವೆ ನಂಬರಿನಲ್ಲಿ 27 ಗುಂಟೆ ಜಮೀನು ಸರ್ಕಾರಕ್ಕೆ ಅಕ್ವೇರ್ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 21 ನ್ನು ಯಾವ ವಿಚಾರಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಹಾಗೂ ಅದರಂತೆ ನ್ಯಾಯಾಲಯದಲ್ಲಿ ಏನು ಆದೇಶ ಆಗಿದೆ ಎಂದರೆ ಸಾಕ್ಷಿಯು ಮಂಜುಳ ವಕೀಲರು ಹಾಕಿರುವ ಕೇಸಿನ ಜಮೀನು ನಮ್ಮ ಜಮೀನು ಎಂದು ನ್ಯಾಯಾಲಯದಿಂದ ಆದೇಶ ಆಗಿದೆ ಎನ್ನುತ್ತಾರೆ.

ನಾವು ಮನೆಯನ್ನು 9 ವರ್ಷದ ಹಿಂದೆ ಕಟ್ಟಲು ಶುರುಮಾಡಿದ್ದೇವೆ. ಸದರಿ ಮನೆಯನ್ನು ಕಟ್ಟಿ ಈಗಾಗಲೇ ಗೃಹಪ್ರವೇಶ ಮಾಡಿದ್ದೀರಾ ಎಂದರೆ ಸಾಕ್ಷಿಯು ಸದರಿ ಮನೆಯನ್ನು ಕಟ್ಟಲು ಮಂಜುಳ ವಕೀಲರು ಹಾಗೂ ಈ ಕೇಸಿನ ವಾದಿ ಬಿಡಲಿಲ್ಲ ಎನ್ನುತ್ತಾರೆ. ಮಂಜುಳ ವಕೀಲರು ನಮಗೆ ಸುಮಾರು 2 ವರ್ಷ ಮನೆ ಕಟ್ಟಲು ತೊಂದರೆ ಕೊಟ್ಟಿದ್ದಾರೆ. ಸದರಿ 2 ವರ್ಷ ಆದ ನಂತರ ಕಟ್ಟಡವನ್ನು ಮುಂದುವರೆಸಿದ್ದೀರಾ ಎಂದರೆ ಸಾಕ್ಷಿಯು ಆಗ ನಮ್ಮ ಅಕ್ಕನ ಮಕ್ಕಳು ಮದುವೆ ಇದ್ದು ಸದರಿ ಮದುವೆಯನ್ನು ಮಾಡಿದ್ದು ನಮಗೆ ಇದ್ದ ಒಂದು ಜಾಗವನ್ನು ಮಾರಾಟ ಮಾಡಿ ಬಂದಿ ಹಣದಿಂದ ಮನೆ ಕಟ್ಟಡ ಮುಂದುವರೆಸೋಣ ಎಂದು ವಿಚಾರ ಮಾಡಿದಾಗ ವಾದಿಯರು ಬಂದು ಈ ದಾವೆ ಹಾಕಿದರು ಎನ್ನುತ್ತಾರೆ.

ನಿಡಿ 8 ಮತ್ತು 9 ರಲ್ಲಿ ಕಾಣುವ ವಸ್ತುಸ್ಥಿತಿ ಈ ಕೇಸು ಹಾಕುವ ಸುಮಾರು 15 ದಿನ ಮುಂಚಿತವಾಗಿ ತೆಗೆಸಿದ್ದಾರೆ. ವಾದಿಯರಿಗೆ ಸೇರಿದ ದಾವಾ ಜಮೀನಿನಲ್ಲಿ ನಾವು ಅಕ್ರಮವಾಗಿ ಮನೆ ಕಟ್ಟಲು ಹೋದಾಗ ವಾದಿಯರು ನಮ್ಮ ಮೇಲೆ ಈ ದಾವೆ ಹಾಕಿದ್ದಾರೆ ಎಂದರೆ ಸುಳ್ಳು. ಈ ದಾವೆಯಲ್ಲಿ ನ್ಯಾಯಾಲಯದಿಂದ ಮದ್ಯಂತರ ನಿರ್ಭಂದಕಾಜ್ಞೆ ಆದೇಶ ಆಗುವವರೆಗೂ ನಾವು ಕಟ್ಟಡವನ್ನು ಲಿಂಟಲ್ ವರೆಗೆ ಕಟ್ಟಿದ್ದೇವೆ ಎಂದರೆ ಸಾಕ್ಷಿಯು ಲಿಂಟಲ್ ವರೆಗೆ ಕಟ್ಟಿದ್ದು ನ್ಯಾಯಾಲಯದಿಂದ ಮದ್ಯಂತರ ನಿರ್ಬಂದಕಾಜ್ಞೆ ಆದ ನಂತರ ನಾವು ಕಟ್ಟಡವನ್ನು ನಿಲ್ಲಿಸಿದ್ದೇವೆ ಎನ್ನುತ್ತಾರೆ. ವಾದಿಯರ ಜಾಗದಲ್ಲಿ ನಾವು ಅಕ್ರಮವಾಗಿ ಕಟ್ಟಡ ಕಟ್ಟಿದಾಗ ವಾದಿಯರು ಹಾಗೂ ನಮ್ಮ ನಡುವೆ ಜಗಳವಾಗಿ ಕೆ ಆರ್ ಪೇಟೆ ಪೊಲೀಸ್ ಠಾಣೆಯ ಪ್ರಥಮ ವರ್ತಮಾನ ವರದಿ ದಾಖಲಾಗಿದೆ ಎಂದರೆ ಸಾಕ್ಷಿಯು ನಮ್ಮ ಜಾಗದಲ್ಲಿ ನಾವು ಕಟ್ಟಡ ಕಟ್ಟಿಕೊಂಡಿದ್ದು ಅವರು ನಮ್ಮ ಮೇಲೆ ಕಂಪ್ಲೆಂಟ್ ಕೊಟ್ಟಿದ್ದು ನಾವು ಅವರ ಮೆಲೆ ಕಂಪ್ಲೆಂಟ್ ಕೊಟ್ಟಿದ್ದೇವೆ ಎನ್ನುತ್ತಾರೆ.

1958 ವ್ಯವಸ್ಥಾ ಪತ್ರದ ಮುಖಾಂತರ 1 ನೇ ವಾದಿಯ ಗಂಡನಿಗೆ ಹೋದ 27 ಗುಂಟೆ ಜಮೀನಿಗೆ ಸುತ್ತಲೂ ಅವರು ತಂತಿ ಬೇಲಿ ಹಾಕಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಅದು ನಮ್ಮ ಜಮೀನು ಹೊರತು ಅವರದ್ದಲ್ಲ ಎನ್ನುತ್ತಾರೆ. ದಿನಾಂಕ 06.02.1958 ರ ವ್ಯವಸ್ಥಾ ಪತ್ರದ ಮುಖಾಂತರ 1 ನೇ ವಾದಿಯ ಗಂಡನಿಗೆ ಆತನ ತಂದೆಯಿಂದ ಬಂದ 27 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಸಿದ್ದಲಿಂಗೇಗೌಡ ನನ್ನೊಂದಿಗೆಯಾಗಲೀ ಅಥವಾ ನಮ್ಮ ತಂದೆಯೊಂದಿಗೆಯಾಗಲೀ ಮತ್ತು ನಮ್ಮ ಕುಟುಂಬದವರೊಂದಿಗೆ ಯಾಗಲೀ ಯಾವುದಾದರೂ ಪತ್ರ ಬರಹ ಮಾಡಿದ್ದಾರಾ ಎಂದರೆ ಸಾಕ್ಷಿಯು ಅವರಿಗೆ ಅಲ್ಲಿ ಜಮೀನು ಇಲ್ಲ

ಎನ್ನುತ್ತಾರೆ. ಓ.ಎಸ್ 362ಃ2010 ನ್ನು ನಮ್ಮ ಅಣ್ಣ ಕೆ.ಎನ್. ನಾಗರಾಜು ವಕೀಲರು ನಡೆಸುತ್ತಿದ್ದಾರೆ. ಈ ದಾವೆಯನ್ನೂ ಸಹ ನಮ್ಮ ಅಣ್ಣ ಕೆ ಎನ್ ನಾಗರಾಜು ವಕೀಲರು ನಡೆಸುತ್ತಿದ್ದಾರೆ. ಪಿಡಬ್ಲ್ಯೂ3, ಪಿಡಬ್ಲ್ಯೂ 4, ಪಿಡಬ್ಲ್ಯೂಃ 5 ಇವರೊಂದಿಗೆ ನನ್ನ ಯಾವುದೇ ವೈಯಕ್ತಿಕ ದ್ವೇಷ ಇಲ್ಲ. ದಾವಾ ಜಮೀನು 1 ನೇ ವಾದಿ ಗಂಡ ಸಿದ್ದಲಿಂಗೇಗೌಡರಿಂದ ಅಥವಾ ಅವರ ಕುಟುಂಬದವರಿಂದ ನಮಗೆ ಕಾನೂನು ಸಮ್ಮತವಾಗಿ ಹೇಗೆ ಬಂತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅವರಿಂದ ನಮಗೆ ಜಮೀನು ಬಂದಿಲ್ಲ ಎನ್ನುತ್ತಾರೆ. ವ್ಯವಸ್ಥಾ ಪತ್ರದ ಮೂಲಕ 1 ನೇ ವಾದಿ ಗಂಡ ಸಿದ್ದಲಿಂಗೇಗೌಡರಿಂದ ಬಂದಂತಹ ದಾವಾ ಜಮೀನನ್ನು ನಾವು ಮತ್ತು ನಮ್ಮ ಕುಟುಂಬದವರು ಸೇರಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಅಕ್ರಮ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ 1 ನೇ ವಾದಿಯ ಗಂಡ ತೀರಿಕೊಳ್ಳುವವರೆಗೂ ಸ್ವಾದೀನದಲ್ಲಿ 1 ನೇ ವಾದಿಯ ಗಂಡನೇ ಇದ್ದು ಆತನು ತೀರಿಕೊಂಡ ನಂತರ ಸದರಿ ಜಮೀನಿನ ಸ್ವಾದೀನದಲ್ಲಿ ವಾದಿಯರು ಇವತ್ತಿನವರೆಗೂ ಇದ್ದಾರೆ ಎಂದರೆ ಸರಿಯಲ್ಲ. ವಾದಿಯರು ದಾವಾ ಜಮೀನಿನಲ್ಲಿ ಸ್ವಾದೀನದಲ್ಲಿರುವ ಬಗ್ಗೆ ಹಾಗೂ 1 ನೇ ವಾದಿಯ ಗಂಡನ ಹೆಸರಿಗೆ ಖಾತೆಯಾಗಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ವಾದಿಯರು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ವಾದಿಯರ ಸ್ವಾದೀನವನ್ನು ಕಿತ್ತುಕೊಳ್ಳಲು ಹಾಗೂ ನಾವು ಕಂದಾಧಿಕಾರಿಗಳೊಂದಿಗೆ ಶಾಮೀಲಾಗಿ ದಾವಾ ಜಮೀನಿನ ಖಾತೆಯನ್ನು ನಮ್ಮ ಹೆಸರಿಗೆ ಅಕ್ರಮವಾಗಿ ಮಾಡಿಕೊಂಡು ಸದರಿ ಜಮೀನಿನಲ್ಲಿ ಅಕ್ರಮವಾಗಿ ಕಟ್ಟಡ ಕಟ್ಟಲು ಹೋಗಿದ್ದೆವು ಎಂದರೆ ಸಾಕ್ಷಿಯು ಸುಳ್ಳು ಎಂದು ಹೇಳಿ ನಮ್ಮ ಜಮೀನಿನಲ್ಲಿ ನಾವು ಕಟ್ಟಿದ್ದೇವೆ ಎನ್ನುತ್ತಾರೆ. ದಾವಾ ಜಮೀನಿನ ದಾಖಲೆಗಳು ಕಾನೂನುಸಮ್ಮತವಾಗಿ ನನ್ನ ಹೆಸರಿಗೆ ಆಗಲೀ ನಮ್ಮ ಕುಟುಬಂದ ಹೆಸರಿಗಾಗಲೀ ಇಲ್ಲ ಎಂದರೆ ಸರಿಯಲ್ಲ. ನಿಡಿ 1 ರಿಂದ 38 ದಾಖಲೆಗಳನ್ನು ನಾವು ನಮ್ಮ ಕೇಸಿಗೆ ಅನುಕೂಲವಾಗಲಿ ಎಂದು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಸ್ವಾದೀನವಾಗಲೀ ಅಥವಾ ಮಾಲೀಕತ್ವಕ್ಕೆ ಸಂಬಂದಪಟ್ಟಂತೆ ಆಗಲೀ ನಮಗೆ ಯಾವುದೇ ದಾಖಲೆಗಳು ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಕ್ರಮವಾಗಿ ಲಾಭ ಹೊಂದಲು ಓ.ಎಸ್ 199ಃ2018 , 120ಃ2018 , 121ಃ2018 ರಂತೆ ದಾವೆಗಳನ್ನು ನಾವು ಹಾಕಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಜಮೀನನ್ನು ಲಪಟಾಯಿಸಲು ನಾವು ಮತ್ತು ಮಂಜುಳ ವಕೀಲರು ಸೇರಿ ಒಬ್ಬರಿಗೊಬ್ಬರು ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

ಮನೆ ಕಟ್ಟಲು ನಾವು ಅನ್ಯಕ್ರಾಂತ ಮಾಡಿಸಿಲ್ಲ ಹಾಗೂ ಲೈಸೆನ್ಸ್ ಪಡೆದಿಲ್ಲ. ದಾವಾ ಜಮೀನು ವಾದಿಯರಿಗೆ ಸೇರಿದ್ದು ಎಂದು ಹೇಳಿ ತಹಶೀಲ್ದಾರ್, ಕೆ.ಆರ್.ಪೇಟೆಯವರು ಒಂದು ಹಿಂಬರಹ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಎ ಸಿ ನ್ಯಾಯಾಲಯದ ಕೇಸು ಮುಗಿಯವವರೆಗೂ ಹಾಗೂ ಸದರಿ ದಾವೆ ಮುಗಿಯುವವರೆಗೂ ಹಾಗೂ ಕೃಷಿ ಜಮೀನನ್ನು ಕೃಷಿಯೇತರ ಜಮೀನನ್ನಾಗಲೀ ಮಾರ್ಪಾಡು ಮಾಡಿಕೊಳ್ಳುವವರೆಗೂ ಕಟ್ಟಡ ಮುಂದುವರೆಸಬಾರದೆಂದು ನಿಪಿ 18 ರಂತೆ ತಹಶೀಲ್ದಾರ್ ಕೆ ಆರ್ ಪೇಟೆಯವರು ನೋಟೀಸ್ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಮೇಲೆ ಮಾಲೀಕತ್ವ ಸ್ವಾದೀನ ಇಲ್ಲದಿದ್ದರೂ ಸಹ ಹೇಗಾದರೂ ಅಕ್ರಮವಾಗಿ ದಾವಾ ಜಮೀನನ್ನು ಪಡೆಯಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಪರವಾಗಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತಿದ್ದರೂ ಸಹ ನನ್ನ ಪಾಟೀ ಸವಾಲಿನಲ್ಲಿ ಗೊತ್ತಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸಾಕ್ಷಿಯು ನಾನು ನಿಜ ಹೇಳುತ್ತಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿಯೇ ಸ್ವಾದೀನದಲ್ಲಿದ್ದಾರೆ ಎಂದು ಪಿಡಬ್ಲ್ಯೂ 3 ರಿಂದ 5 ಇವರು ನ್ಯಾಯಾಲಯದ ಸುಳ್ಳು ಸಾಕ್ಷಿ ಹೇಳಿದ್ದಾರೆ ಎಂದರೆ ಸರಿಯಲ್ಲ. ವ್ಯವಸ್ಥಾಪತ್ರದ ಮೂಲಕ ದಾವಾ ಜಮೀನು 1 ನೇ ವಾದಿಯ ಗಂಡನಿಗೆ ಬಂದಿರುವ ವಿಚಾರ ಗೊತ್ತಿದ್ದರೂ ಸಹ ಹಾಗೂ ದಾವಾ ಜಮೀನಿನಲ್ಲಿ ವಾದಿಯರು ಸ್ವಾದೀನದಲ್ಲಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗಾಗಲೀ ಅಥವಾ ನಮ್ಮ ಕುಟಂಬದವರಿಗಾಗಲೀ ಯಾವುದೇ ಹಕ್ಕು ಸ್ವಾದೀನ ಇಲ್ಲ ಎಂದರೆ ಸಾಕ್ಷಿಯು ಇದೆ ಎನ್ನುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ

ಕುಟುಂಬದ ಸ್ವತ್ತುಗಳು ನಮ್ಮ ಹೆಸರಿಗೆ ಖಾತೆಯಾಗಿವೆ. ಈ ಕೇಸಿನ ವಿದ್ಯಮಾನಗಳು ನಮ್ಮ ಪರವಾಗಿ ಇಲ್ಲ ಎಂದು ನನಗೆ ಗೊತ್ತಿದ್ದರೂ ಸಹ ನಮ್ಮ ಕುಟುಂಬದವರ ಮಾತು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದ ಂಡಾಧಿಕಾರಿಗಳು, ಕೃಷ್ಣರಾಜಪೇಟೆ.